the administration and all that. Let it be examined. I have no objection.

ಶ್ರೀ ರಾಜುಗೌಡ.—ಸ್ವಾಮಿ, ೫ಕೋಟಿ ರೂಪಾಯಿ ನಷ್ಟವಾಗುವುದಕ್ಕೆ ಮುಖ್ಯವಾದ ಕಾರಣ ಗಳೇನು ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಉಪಾಧ್ಯಕ್ಷರು.—ಡಿಟೈಲ್ಸ್ ರಿಪೋರ್ಟ್ ಬರುತ್ತೆ ಎಂದು ಹೇಳುತ್ತಿದ್ದಾರೆ.

ಶ್ರೀ ವೈ. ರಾಮಕೃಷ್ಣ.—೪ ಕೋಟಿ ೮೦ಲಕ್ಷ ರೂಪಾಯಿಗಳನ್ನು ಕಾರ್ಮಿಕರಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ಸಿದ್ದವಮಾದಯ್ಯ.—ಯಾವ ಯಾವ ಮೂಲದಿಂದ ನಷ್ಟವಾಗಿದೆ ? ಯಾವ ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಜನರಿಗೆ ಕೊಟ್ಟಿದ್ದೀರಿ ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಪರದಿ ಬರುತ್ತೆಂದು ಹೇಳಿದ್ದೇನೆ ಆದರಲ್ಲಿ ಎಲ್ಲಾ ವಿಷಯು ಗಳು ಇರುತ್ತವೆ.

Taking over of N D High School of Morigere in H B Halli Taluk

117. SRI N. KARIBASAVANA GOWDA (Hadagalli)—Will the Minister of State for Primary and Secondary Education be pleased to State,

(a) was there any proposal before the Government in 1979 to take over N. D. High School of Morigeri in H. B. Halli, Taluk which is run by a Private Body since 1966 ,

(b) whether they would take over the School under its control ;

(c) if not the reasons thereon ?

SMT NAGAMMA C KESHAVAMURTHY (Minister of State for Primary and Secondary Education).—

(a) Yes.

(b) No.

(c) Government have decided not to take-over any Private Schools due to constraints of finance.

ಶ್ರೀ ಎನ್. ಕರಿಬಸವನ ಗೌಡ.—ಮಾನ್ಯ ಅಧ್ಯಕ್ಷರೇ, ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನ ಮೋರಿಗೆರೆಯಲ್ಲಿ ಎನ್. ಡಿ. ಪ್ರೌಢಶಾಲೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಬೇಕೆನ್ನುವ ಸದುದ್ದೇಶದಿಂದ ಸ್ಥಾಪನೆ ಮಾಡಲಾಯಿತು. ಇಂದು ಸದರಿ ಶಾಲೆಯನ್ನು ನಡೆಸುವುದಕ್ಕೆ ಹಣಕಾಸಿನ ತೊಂದರೆಯಿರುವುದರಿಂದ, ಸರ್ಕಾರದವರು ವಹಿಸಿಕೊಳ್ಳಬೇಕೆಂದು ಮನವಿ ಮಾಡ ಲಾಗಿತ್ತು. ಇವತ್ತು ಮಂತ್ರಿಯವರ ಉತ್ತರದಲ್ಲಿ ಹಣಕಾಸಿನ ತೊಂದರೆಯಿಂದ ಆಗುವುದಿಲ್ಲವೆಂದು ತಿಳಿಸಿದ್ದಾರೆ. ಈ ಹಿಂದೆ ನೂರಾರು ಶಾಲೆಗಳನ್ನು ಸರ್ಕಾರ ತೆಗೆದುಕೊಂಡಿರುವಂಥ ಸಂದರ್ಭದಲ್ಲಿ ಹಣ ಕಾಸಿನ ತೊಂದರೆ ಇರಲಿಲ್ಲವೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ಈ ಶಾಲೆ ೧೯೬೬ರಲ್ಲಿ ಪ್ರಾರಂಭ ವಾಗಿ, ೧೯೭೯ರಲ್ಲಿ ಸರ್ಕಾರಕ್ಕೆ ಸದರಿ ಶಾಲೆಯನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿದೆ. ೧೯೮೦ರಲ್ಲಿ ಸರ್ಕಾರ ಈ ಶಾಲೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ರಿಜೆಕ್ಟ್ ಮಾಡಿದೆ. "ಅನುದಾನ ಪಡೆಯುತ್ತಿರುವ ಖಾಸಗಿ ಶಾಲೆಗಳನ್ನು ಸರ್ಕಾರ ತೆಗೆದುಕೊಳ್ಳಬಾರದೆಂಬ ತೀರ್ಮಾನ ಮಾಡಿದೆ. ಇದು ಸರ್ಕಾರದ ನೀತಿಯಾಗಿದೆ. ಈ ಒಂದು ಸಂಸ್ಥೆಯಲ್ಲಿ ಮ್ಯಾನೇಜ್‌ಮೆಂಟ್ ಸರಿಯಲ್ಲ, ಸರಿಯಾಗಿ ಶಾಲೆ ಯನ್ನು ನಡೆಸುತ್ತಿಲ್ಲ ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳಿದರೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಕರಿಬಸವನಗೌಡ. —ದುರಾಡಳಿತ ಮತ್ತು ದುರುಪಯೋಗದಿಂದ ಸಂಘಗಳನ್ನು ಕಟ್ಟುವುದಕ್ಕೆ ಮುಂದೆ ಬರುತ್ತಾರೆ: ಇದು ಸದುದ್ದೇಶದಿಂದ ಕಟ್ಟಿದಂಥ ಶಾಲೆ, ಸರ್ಕಾರ ಖಾಸಗಿ ರಂಗದ ಶಾಲೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ತೀರ್ಮಾನ ಮಾಡಿರುವುದು ಸೂಕ್ತವಲ್ಲ ಈ ಶಾಲೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ನಾವು ಶಾಲೆಗಳನ್ನು ತೆಗೆದುಕೊಳ್ಳುವುದರಿಂದ ಒಟ್ಟೊಂದು ನಮಗೆ ದೊಡ್ಡ ಸಮಸ್ಯೆ ಉಂಟಾಗುತ್ತದೆ. ಉಪಾಧ್ಯಾಯರ ಸೇವಾವಧಿ ವಿಷಯ. ೧೦-೫೫ ವರ್ಷಗಳಿಂದ ಒಂದೇ ಶಾಲೆಯಲ್ಲಿ ಕೆಲಸ ಮಾಡಿ, ಸರ್ಕಾರಿ ನೌಕರರಾಗಿ ಪರಿವರ್ತನೆಯಾದಾಗ ಸೀನಿಯಾರಿಟಿ ಪ್ರಶ್ನೆ ಕೂಡ ಬಂದು, ತೊಂದರೆಯಾಗುತ್ತದೆ.

ಶ್ರೀ ಎನ್. ಕರಿಬಸವನ ಗೌಡ —ಖಾಸಗಿ ರಂಗದಲ್ಲಿರತಕ್ಕ ಹೈಸ್ಕೂಲುಗಳನ್ನು ತೆಗೆದುಕೊಂಡು ನಡೆಸುವುದಕ್ಕೆ ಇರತಕ್ಕ ತೊಂದರೆ ತೊಂದರೆ ಏನಿದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ನಾವು ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಸಂಬಳ ಮಾತ್ರ ಕೊಡುತ್ತೇವೆ. ಮಿಕ್ಕ ಜವಾಬ್ದಾರಿಯನ್ನು ಮ್ಯಾನೇಜ್‌ಮೆಂಟಿನವರೇ ನೋಡಿಕೊಳ್ಳಬೇಕು. ಸರ್ಕಾರದ ನೀತಿ ಏರುಪ್ಪು ಈ ಶಾಲೆಯನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ.

Preparation of drought / flood Atlas for Karnataka.

569 SRI G. BASAVANNAPPA (Holehonnur). —Will the Minister of State for Major and Medium Irrigation be pleased to State;—

(a) whether there is any proposal to prepare and publish a Drought/Flood Atlas for Karnataka;

(b) if so, the details may be given;

(c) the action, Government proposes to take for linking the drought and flood areas for mutual benefits?

SRI B. B. CHIMMANAKATTI (Minister of State for Major and Medium Irtigation)

(a) There is a proposal to prepare a Flood Atlas in the State. Drought Atlas is being prepared by Government of India.

(b) The field data for the preparation of Flood Atlas from the year 1980 onwards is being collected.

(c) There are certain proposals for diverting surplus water of west flowing stream to augment the needs of drought areas in the eastern part of the State These are under study.

ಶ್ರೀ ಭೀಮಣ್ಣ ಖಂಡ್ರೆ. —(ಶ್ರೀ ಬಿ. ಬಸವಣ್ಣಪ್ಪನವರ ಪರವಾಗಿ).—ಕರ್ನಾಟಕದ ಬರಗಾಲ ಹಾಗೂ ನೆರೆಯ ಭೂಪಟವನ್ನು ತಯಾರಿಸಿ ಪ್ರಕಟಪಡಿಸುವ ಸಲಹೆ ಏನಾದರೂ ಇದೆಯೆಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ. ಎಷ್ಟು ದಿವಸದಲ್ಲಿ ಮುಗಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಮಾನ್ಯ ಅಧ್ಯಕ್ಷರೇ, ಬರಗಾಲ ಮತ್ತು ನೆರೆಯ ಹಾವಳಿಗೆ ಸಂಬಂಧ ಪಟ್ಟ ಭೂಪಟವನ್ನು ಕೇಂದ್ರ ಸರ್ಕಾರದವರು ತಯಾರು ಮಾಡುತ್ತಾರೆ. ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರ ೧೯೮೦ನೇ ಇಸವಿಯಲ್ಲಿ ಡಾಟಾ ಕಲೆಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡಲಾಗಿದೆ. ಕನಿಷ್ಟ ಹತ್ತು ವರ್ಷಗಳಾದರೂ ಬೇಕಾಗಬಹುದು.